## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ, ಜೇವರ್ಗಿ

**ಸಿ.ಸಿ.ನಂಃ 253/2022**

| | |
|---|---|
| ಪಿರ್ಯಾದಿದಾರಃ | ಕರ್ನಾಟಕ ರಾಜ್ಯದ ಪರ ಜೇವರ್ಗಿ ಪೋಲಿಸ ಠಾಣೆ |
| | **ವಿರುದ್ಧ** |
| ಆರೋಪಿ | ಮಲ್ಲಿಕಾರ್ಜುನ ತಂದೆ ತಿಪ್ಪಣ್ಣಾ ಹೊಸಮನಿ,<br>ವಃ 28 ವರ್ಷ, ಉಃ ಕೂಲಿ ಕೆಲಸ, ಸಾಃ ಹಾಳಬಾವಿ,<br>ತಾಃ ಶಹಾಪೂರ,ಜಿಃ ಯಾದಗಿರಿ |

## ದೋಷಾರೋಪಣೆ

ಸಂದೀಪ್.ಎ.ನಾಯಿಕ್ ಬಿ.ಎ., ಎಲ್ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳಾದ ನಾನು, ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ

ದಿನಾಂಕ 25-06-2021ರಂದು ಮಧ್ಯಾಹ್ನ 02-00 ಗಂಟೆ ಸಮಯದಲ್ಲಿ ಜೇವರ್ಗಿ ಪೋಲಿಸ ಠಾಣಾ ವ್ಯಾಪ್ತಿಯ ಇಜೇರಿ-ಸಾಥಖೇಡ ರಸ್ತೆಯ ಹತ್ತಿರದ ಮಲ್ಲಪ್ಪ ಸುರಪೂರ ಇವರ ಹೊಲದ ಹತ್ತಿರದ ಕೆನಾಲ್ ರಸ್ತೆಯ ಮೇಲೆ ಆರೋಪಿಯಾದ ನೀವು ಚಾಸಾ-1 ರವರನ್ನು ಬಲಾತ್ಕಾರ ಮಾಡುವ ಉದ್ದೇಶದಿಂದ ಚಾಸಾ-1 ರವರ ಕೈ ಹಿಡಿದು ಎಳೆದು ಮುಂದಕ್ಕೆ ಹೋಗದಂತೆ ತಡೆದು ನಿಲ್ಲಿಸಿ, ಅಕ್ರಮ ಪ್ರತಿಬಂಧನವನ್ನುಂಟು ಮಾಡಿದ ಕಾರಣ, ಭಾರತೀಯ ದಂಡ ಸಂಹಿತೆ ಕಲಂ 341 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು, ಮೇಲೆ ಹೇಳಿದ ವಿಚಾರವಾಗಿ ಆರೋಪಿಯಾದ ನೀವು ಚಾಸಾ-1 ರವರನ್ನು ಮೇಲೆ ತಿಳಿಸಿದ ವಿಚಾರವಾಗಿ ಚಾಸಾ-1 ರವರ ಕೈಹಿಡಿದು ಜಗ್ಗಿ ಅವರ ಮೈ ಮೇಲಿನ ಕುಪ್ಪಸವನ್ನು ಹಿಡಿದು ಎಳೆದು ಬಾ ಎಂದು ಬಲವಂತದಿಂದ ಒತ್ತಾಯ ಮಾಡಿ ಕುಮ್ಮಕ್ಕು ನೀಡಿ ಚಾಸಾ-1 ರವರ ಮೇಲೆ ಅಪರಾಧಿಕ ಬಲಪ್ರಯೋಗವನ್ನುಂಟು ಮಾಡಿದ ಕಾರಣ ಹಾಗೂ ಅವರ ಹೆಣ್ಣುತನಕ್ಕೆ ಅಗೌರವ ತೋರಿಸಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 354 (B) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು, ಮೇಲೆ ಹೇಳಿದ ವಿಚಾರವಾಗಿ ಆರೋಪಿಯಾದ ನೀವು ಚಾಸಾ-1 ರವರಿಗೆ "ಏ ಬೊಸಡಿ ಬಾ" ಎಂದು ಹಾಗೂ ಚಾಸಾ-1 ರವರ

ಮಗನಾದ ಚಾಸಾ–4 ರವರಿಗೆ ಬೋಸಡಿಕೆ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ಚಾಸಾ–1 ಮತ್ತು 4 ರವರಿಗೆ ಅವಮಾನವನ್ನುಂಟು ಮಾಡಿ ಚಾಸಾ–4 ರವರು ಸಮಾಜದ ಶಾಂತಿಯನ್ನು ಕೆಡಿಸುವಂತೆ ಚಾಸಾ–1 ಮತ್ತು 4 ರವರನ್ನು ಉದ್ರೇಕಿಸಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 504 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು, ಮೇಲೆ ಹೇಳಿದ ವಿಚಾರವಾಗಿ ಆರೋಪಿಯಾದ ನೀವು ಚಾಸಾ–1 ರವರ ಕೈಹಿಡಿದು ಜಗ್ಗಿ ಚಾಸಾ–1 ರವರಿಗೆ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ ಕಾರಣ, ಭಾರತೀಯ ದಂಡ ಸಂಹಿತೆ ಕಲಂ 323 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೇಲ್ಕಂಡ ಆಪಾದನೆಗೆ ಆರೋಪಿಗಳಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

ಸ್ಥಳಃ ಜೇವರ್ಗಿ (ಸಂದೀಪ್.ಎ.ನಾಯಿಕ್)
ದಿಃ 20–05–2024 ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ

**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ, ಜೇವರ್ಗಿ</u>**

**<u>ಸಿ.ಸಿ.ನಂಃ 253/2022</u>**

ಪಿರ್ಯಾದುದಾರಃ ಕರ್ನಾಟಕ ರಾಜ್ಯದ ಪರ ಜೇವರ್ಗಿ ಪೋಲಿಸ ಠಾಣೆ

**ವಿರುದ್ಧ**

ಆರೋಪಿ ಮಲ್ಲಿಕಾರ್ಜುನ ತಂದೆ ತಿಪ್ಪಣ್ಣಾ ಹೊಸಮನಿ,
ವಃ 28 ವರ್ಷ, ಉಃ ಕೂಲಿ ಕೆಲಸ, ಸಾಃ ಹಾಳಬಾವಿ,
ತಾಃ ಶಹಾಪೂರ,ಜಿಃ ಯಾದಗಿರಿ

**<u>ದೋಷಾರೋಪಣೆ</u>**

ಪ್ರಶ್ನೆ1:- ಮೇಲ್ಕಂಡ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?
ಉತ್ತರ:-

ಪ್ರಶ್ನೆ2:- ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ
ವಿಚಾರಣೆಯಾಗಬೇಕೋ?

ಉತ್ತರ:-

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿಯ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

ಸ್ಥಳಃಜೇವರ್ಗಿ (ಸಂದೀಪ್.ಎ.ನಾಯಿಕ್)
ದಿನಾಂಕ: 20-05-2024 ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ.